ದಿನಾಂಕಃ 04-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಹೆಚ್ ಕೆ ಹೆಚ್ ವಕೀಲರಿಂದ,

1) ವಾದಿ ಆರೋಗ್ಯವಾಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ನನ್ನ ಪರವಾಗಿ ಅಧಿಕಾರ ಪತ್ರ ಬರೆದುಕೊಟ್ಟ ನಂತರ ವಾದಿಯೇ ಉಪನೋಂದಣಾಧಿಕಾರಿ ಕಚೇರಿಗೆ ಹಾಜರಾಗಿ ಕೆಲವು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ವಾದಿಯು ಚೆನ್ನಾಗಿ ಓಡಾಡುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಮಂಡಿ ನೋವು ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸುತ್ತೇನೆ. ವಾದಿ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ನುಡಿದರೆ ಸಂತ್ಯಾಂಶ ಗೊತ್ತಾಗುತ್ತದೆ ಎಂದು ಅಧಿಕಾರ ಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

2) ನಾನು ಹತ್ತನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಕಂದಾಯ ಇಲಾಖೆಯಲ್ಲಿ ವಾಹನ ಚಾಲಕನಾಗಿ 1998 ರಲ್ಲಿ ನೇಮಕಗೊಂಡಿರುತ್ತೇನೆ. 2020 ರಲ್ಲಿ ನಾನು ನಿವೃತ್ತಿ ಆಗಿರುತ್ತೇನೆ. ನಾನು ದಿನಾಂಕ 28.02.2020 ರಂದು ನಿವೃತ್ತಿ ಆಗಿರುತ್ತೇನೆ.

3) ವಾದಿ ಸರ್ವೇ ನಂ.118/ಡಿ4 ರಲ್ಲಿ ಒಟ್ಟು 8 ನಿವೇಶಗಳನ್ನು ಮಾಡಿರುತ್ತೇವೆ. ದಾವಾ ಸ್ವತ್ತುಗಳ ಖಾತೆಯ ಸಂಖ್ಯೆ 9905 ಆಗಿರುತ್ತದೆ. ದಾವಾ ಸ್ವತ್ತುಗಳ 8 ನಿವೇಶನಗಳ ಅಸೆಸೆಮೆಂಟ ಸಂಖ್ಯೆ 10471 ಆಗಿರುತ್ತದೆ. ಎಲ್ಲಾ 8 ನಿವೇಶಗಳು ತಲಾ 30x40 ಅಡಿ ಇರುತ್ತವೆ. ಎರಡು ನಿವೇಶಗಳನು 30x60 ಇರುತ್ತವೆ.

4) ನಾನು ಪ್ರತಿವಾದಿಗಳ ವಿರುದ್ಧ ವಾದಿಗೆ ಸೇರಿದ ಜಮೀನಿನಲ್ಲಿ ಕಲ್ಲು ಕಿತ್ತಿರುತ್ತಾರೆ ಎಂದು ದೂರು ನೀಡಿರುತ್ತೇನೆ ಎಂದರೆ ಸರಿ. ನಿಶಾನೆ ಪಿ-40 ಮತ್ತು 41 ನಕ್ಷೆಗಳು ಒಂದೇ ಆಗಿರುತ್ತವೆ. ನಿಶಾನೆ ಪಿ-40 ಮತ್ತು 41 ನಕ್ಷೆಗಳು ಸರ್ವೇ ನಂ.

118/4 ಡಿ ಆಸ್ತಿಗೆ ಸಂಬಂಧಪಟ್ಟ ನಕ್ಷೆಗಳಾಗಿರುತ್ತವೆ. ನಿಶಾನೆ ಪಿ-40 ಮತ್ತು 41 ದಾಖಲೆಗಳನ್ನು ದಿನಾಂಕ 05.02.2023 ರಂದು ತಯಾರು ಮಾಡಲಾಗಿದೆ. ನಿಶಾನೆ ಪಿ-40 ಮತ್ತು 41 ರಲ್ಲಿ ಮುಖ್ಯಾಧಿಕಾರಿಗಳು ದಿನಾಂಕವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಶಾನೆ ಪಿ-40 ಮತ್ತು 41 ನಕ್ಷೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಶಾನೆ ಪಿ-40 ಮತ್ತು 41 ನಕ್ಷೆಗಳು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಗೊಂಡಿಲ್ಲ ಎಂದರೆ ಸರಿಯಲ್ಲ.

5) ನಿಶಾನೆ ಪಿ-6 ಕ್ರಯ ಪತ್ರದಂತೆ ಗಾಯತ್ರಮ್ಮ ಎಷ್ಟು ವಿಸ್ತೀರ್ಣವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು 4 ಗುಂಟೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಗಾಯತ್ರಮ್ಮ ರವರು ಆದಾರ ಪತ್ರವನ್ನು ವಾದಿ ಹೇಳಿದಂತೆ ಮಾಡಿಕೊಟ್ಟಿರುತ್ತಾರೆ. ಸರ್ವೇ ನಂ. 147 ಮತ್ತು ಕಾಗಿನೆಲೆ ಕನಕದುರ್ಗ ಪೀಠ ಹಿಂಬಾಗದ ಆಸ್ತಿಯವರೆಗೂ ಸುಮಾರು 1 ಪರ್ಲಂಗ್ ದೂರ ಇರುತ್ತದೆ. ಕಾಗಿನೆಲೆ ಕನಕದುರ್ಗ ಪೀಠ ಚೀರನಹಳ್ಳಿ ರಸ್ತೆಯಲ್ಲಿ ಬರುತ್ತದೆ ಎಂದರೆ ಸರಿ. ಗಾಯತ್ರಮ್ಮ ರವರು ಪಿ ಎಲ್ ಡಿ ಬ್ಯಾಂಕಿನಲ್ಲಿ ನೌಕರರಾಗಿದ್ದರು ಎಂದರೆ ಸರಿ. ಆದಾರ ಪತ್ರದಲ್ಲಿ ಚೆಕ್ಕು ಬಂದಿಯನ್ನು ವಾದಿಯೇ ಬರೆಸಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ವಕೀಲರು ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ